## <u>ಮದ್ಯಂತರ ಅರ್ಜಿ 1 ರ ಮೇಲೆ ಆದೇಶ</u>

ಪ್ರಸ್ತುತ ದಾವೆಯನ್ನು ವಾದಿಯು ಪ್ರತಿವಾದಿಯರ ವಿರುದ್ದ ಕರ್ತವ್ಯ ನಿರ್ಬಂಧಕಾಜ್ಞೆ ಕುರಿತು ದಾಖಲ ಪಡಿಸಿರುತ್ತಾರೆ. ವಾದಿಯು ದಾವೆಯೊಂದಿಗೆ 1 ನೇ ಮದ್ಯಂತರ ಅರ್ಜಿಯನ್ನು ದಿವಾಣಿ ಪ್ರಕ್ರಿಯಾ ಸಂಹಿತೆ ಆದೇಶ 26 ನಿಯಮ 9 ನೇದ್ದರಡಿಯಲ್ಲಿ ದಾಖಲಿಸಿ ನ್ಯಾಯವಾದಿ ಒಬ್ಬರನ್ನು ನ್ಯಾಯಾಲಯದ ಆಯುಕ್ತರೆಂದು ನೇಮಕ ಮಾಡುವಂತೆ ಮತ್ತು ಪ್ರತಿವಾದಿಯರ ತೆಂಗಿನ ಗಿಡಗಳ ಮತ್ತು ಅಡಿಕೆ ಗಿಡಗಳ ಸ್ಥಿತಿ ಗತಿ ಬಗ್ಗೆ ಹಾಗೂ ದಾವಾ ಆಸ್ತಿಯಲ್ಲಿರುವ ಮನೆಗಳ ವಸ್ತುಸ್ಥಿತಿ ಬಗ್ಗೆ ವರದಿ ಒಪ್ಪಿಸುವಂತೆ ಕಮೀಷನ ನೇಮಕ ಮಾಡುವಂತೆ ಕೊರಿ ಕೊಂಡಿರುತ್ತಾರೆ. ಕಡತದಲ್ಲಿರುವ ದಾಖಲೆಗಳನ್ನು ಅವಲೋಕಿಸಲಾಯಿತು. ಪ್ರತಿವಾದಿಯರಿಗೆ ಅವಕಾಶ ನೀಡದೇ ಎಕತರ್ಫಿ ಆದೇಶ ಮಾಡುವುದು ಸೂಕ್ತವಾಗಿರುವುದಿಲ್ಲ, ವಾದಿ ಈ ಹಂತದಲ್ಲಿ ಮೆಲ್ನೋಟಕ್ಕೆ ದಾವೆ ಇರುವುದಾಗಿ

ತೋರಿಸಿಕೊಟ್ಟಿರುವುದಿಲ್ಲ. ಆ ಕಾರಣ 1 ನೆ ಮದ್ಯಂತರ ಅರ್ಜಿ ನೋಟಿಸ ಹಾಗೂ ದಾವಾ ಸಮನ್ಸನ್ನು ಪ್ರತಿವಾದಿಯರಿಗೆ ಹೊರಡಿಸತಕ್ಕದ್ದು.

ದಿನಾಂಕ.4/4/2019 ರಂದು ಪ್ರಕರಣ ಕರೆಯತಕ್ಕದ್ದು.

ಸಿವಿಲ್ ನ್ಯಾಯಾಧೀಶರು ಅಂಕೋಲಾ.